OCTOBER 27, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಮನ್ ಕಿ ಬಾತ್; ಬಾಗಲಕೋಟೆ ಜಿಲ್ಲೆ, ಮುಧೋಳ ಬೇಟೆ ನಾಯಿ, ಗಡಿ ರಕ್ಷಣಾ ಪಡೆ ಸೇರ್ಪಡೆಗೆ, ಪ್ರಧಾನಮಂತ್ರಿ ಮೆಚ್ಚುಗೆ.**

- **79ನೇ, 'ಪದಾತಿ ದಳ ದಿನಾಚರಣೆ'; ಬೆಳಗಾವಿಯ, ಮರಾಠಾ ಲಘು ಪದಾತಿ ದಳದಿಂದ, 'ಶೌರ್ಯವೀರ್ ಮ್ಯಾರಾಥಾನ್'.**

- **'ಗುಣಮಟ್ಟದ ಮಾವು ಉತ್ಪಾದನೆ ಹಾಗೂ ರಫ್ತು': ಮಾವು ಕೃಷಿಕರ, ರಾಷ್ಟ್ರೀಯ ಕಾರ್ಯಾಗಾರ, ಧಾರವಾಡದಲ್ಲಿ, ಯಶಸ್ವಿ ಸಂಪನ್ನ.**
- **'ಜಾಗರೂಕತೆ; ಸಹಭಾಗಿತ್ವದ ಹೊಣೆ' ಧ್ಯೇಯದೊಂದಿಗೆ, ಇಂದಿನಿಂದ ನವೆಂಬರ್ 2ರ ವರೆಗೆ, 'ಜಾಗರೂಕತೆ ಸಪ್ತಾಹ'.**

<><><>

**ಈಗ ವಾರ್ತೆಗಳ ವಿವರ**

<><><>

**ಭಾರತೀಯ ತಳಿ ಶ್ವಾನಗಳಾದ, ಕರ್ನಾಟಕದ ಮುಧೋಳ ಹೌಂಡ್, ಉತ್ತರಪ್ರದೇಶದ ರಾಮಪುರ ಹೌಂಡ್, ಕೊಂಬೈ ಮತ್ತು ಪಾಂಡಿಕೋನ್ ತಳಿಯ ದೇಸಿ ತಳಿ ನಾಯಿಗಳನ್ನು ದೇಶವಾಸಿಗಳು ಹಾಗೂ ಭದ್ರತಾ ಪಡೆಗಳು ದತ್ತು ಪಡೆಯುವಂತೆ, ಮಾಡಿದ ತಮ್ಮ ಆಗ್ರಹಕ್ಕೆ, ಗಡಿ ರಕ್ಷಣಾ ಪಡೆ – ಬಿ.ಎಸ್.ಎಫ್ ಹಾಗೂ ಕೇಂದ್ರೀಯ ಮೀಸಲು ಪೊಲೀಸ್ ಪಡೆ – ಸಿ.ಆರ್.ಪಿ.ಎಫ್. ಕಳೆದ 5 ವರ್ಷಗಳಲ್ಲಿ ಶ್ಲಾಘನೀಯ ಪ್ರಯತ್ನ ಮಾಡಿವೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಸಂತಸ ವ್ಯಕ್ತ ಪಡಿಸಿದ್ದಾರೆ. ಆಕಾಶವಾಣಿಯ, ಬಹುಶ್ರುತ, ಮನ್ ಕಿ ಬಾತ್ ನ, 127ನೇ ಆವೃತ್ತಿಯಲ್ಲಿ ಅವರು, ದೇಶ–ವಿದೇಶಗಳ ಭಾರತೀಯರನ್ನುದ್ದೇಶಿಸಿ, ತಮ್ಮ ಮನದ ಮಾತು ಹಂಚಿಕೊಂಡರು.**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ (ಶ್ವಾನ ದತ್ತು) 72 ಸೆಕೆಂದುಗಳು**

<><><>

**ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕು, ತಿಮ್ಮಾಪುರದ ಮುಧೋಳ ತಳಿ ಶ್ವಾನ ಹಾಗೂ ವಿಜಯವಾಡಾದ ರಾಮಪುರ ತಳಿ ಶ್ವಾನಗಳನ್ನು, ಬಿ.ಎಸ್.ಎಫ್. ಹಾಗೂ ಸಿ.ಆರ್‌ಪಿ.ಎಫ್. ದತ್ತು ಪಡೆದು, ಗಡಿಗಳ ಕಾವಲಿಗೆ ಸೂಕ್ತ ತರಬೇತಿ ನೀಡಿ, 'ಕೆ–9 ಹೌಂಡ್ಸ್ ಸ್ಕ್ವಾಡ್' ರೂಪಿಸಿದೆ. ಈ ಕುರಿತು ಒಂದು ವರದಿ..**

<><><>

***'ಆತ್ಮನಿರ್ಭರ ಭಾರತ' ಹಾಗೂ 'ವೋಕಲ್ ಫಾರ್ ಲೋಕಲ್' ಪ್ರಕಲ್ಪಗಳಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ, ನಾಲ್ಕು ವಿಶಿಷ್ಠ ತಳಿ ದೇಸಿ ಶ್ವಾನಗಳನ್ನು, ಭದ್ರತಾ ಪಡೆಗಳು ದತ್ತು ಪಡೆದು, ಈಗ ದೇಶ ಹಾಗೂ ಗಡಿ ರಕ್ಷಣೆಗೆ ಅಣಿ ಗೊಳಿಸಿವೆ. 2020ರ ಆಗಸ್ಟ್ ತಿಂಗಳ, 'ಮನ್ ಕಿ ಬಾತ್'ನಲ್ಲಿ, ಪ್ರಧಾನಮಂತ್ರಿಯವರು, ಮುಧೋಳ ಹಾಗೂ ರಾಮಪುರ ತಳಿ ಶ್ವಾನಗಳನ್ನು, ಗಡಿ ರಕ್ಷಣಾ ಪಡೆಗೆ ಸೇರಿಸುವ ಮಹತ್ವಾಕಾಂಕ್ಷೆ ವ್ಯಕ್ತಪಡಿಸಿ, ವಿಶೇಷವಾಗಿ ಉಲ್ಲೇಖಿಸಿದ್ದರು.***

***ಬಾಗಲಕೋಟೆ ಜಿಲ್ಲೆ, ಮುಧೋಳ ತಳಿ ಶ್ವಾನ ಸಂವರ್ಧನಾ ಕೇಂದ್ರ, ಬೀದರ ಪಶು ಚಿಕಿತ್ಸೆ, ಪಶು ಪಾಲನೆ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಲಗ್ನತೆ ಹೊಂದಿದೆ. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲೂಕು, ಮುಧೋಳದ ಹಿರಿಯ ಪತ್ರಕರ್ತ, ಮಲ್ಲಿಕಾರ್ಜುನ ಹೆಗ್ಗಳಗಿ.***

<><><>

**ಆರತಿ (48) + ಮಲ್ಲಿಕಾರ್ಜುನ ಹೆಗ್ಗಳಗಿ ಧ್ವನಿ (39) ಸೆಕೆಂದುಗಳು**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮನದ ಮಾತಿನಲ್ಲಿ, ಕರ್ನಾಟಕದ ಚಿಕ್ಕಮಗಳೂರು, ಕೊಡಗು ಮತ್ತು ಹಾಸನದ, ವಿಶಿಷ್ಟ ಸ್ವಾದವುಳ್ಳ ಕಾಫಿ ಬಗ್ಗೆ ಉಲ್ಲೇಖಿಸಿದರು. ಭಾರತದ ಕಾಫಿ ಎಂದರೆ, ಅದು ವಿಶ್ವದಲ್ಲೇ ಅತ್ಯುತ್ತಮ ಸ್ವಾದವುಳ್ಳದ್ದು; ಭಾರತದಲ್ಲಿ ತಯಾರಿಸಲಾಗುತ್ತದೆ ಮತ್ತು ಜಗತ್ತು ಭಾರತದ ಕಾಫಿಯನ್ನು, ಪ್ರೀತಿಸುತ್ತದೆ, ಎಂದರು.**

<><><>

**ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡುವ, 'ಸ್ವಚ್ಛ ಭಾರತ; ಸ್ವಸ್ಥ ಭಾರತ' ವಿಶೇಷ ಅಭಿಯಾನ 5.ಓ ಬಗ್ಗೆ, ಮನ್ ಕಿ ಬಾತ್ ನಲ್ಲಿ ಒತ್ತು ನೀಡಿದ, ಪ್ರಧಾನಮಂತ್ರಿಯವರು, ಬೆಂಗಳೂರಿನ ಅಭಿಯಂತರ, ಕಪಿಲ ಶರ್ಮಾ ಹಾಗೂ ತಂಡ, ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ, 40 ಬಾವಿಗಳು ಹಾಗೂ ಆರು ಕೆರೆಗಳನ್ನು ಪುನರುಜ್ಜೀವಿತ ಗೊಳಿಸಿ, 'ಏಕ್ ಪೇಡ್ ಮಾ ಕೇ ನಾಮ್' ಅಭಿಯಾನದಡಿ, ಗಿಡ ನೆಡುವ ಕಾರ್ಯವನ್ನು, ವ್ರತದಂತೆ ಪಾಲಿಸುತ್ತಿರುವುದು, ಅನುಕರಣೀಯ ಮಾದರಿ ಎಂದು, ಶ್ಲಾಘಿಸಿದರು.**

<><><>

**ಈಗ ವಾಣಿಜ್ಯ ಪ್ರಕಟಣೆ,**
**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**
**(31 ಸೆಕೆಂದುಗಳು)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_Kannada** ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ಭಾರತೀಯ ಸೇನೆಯ, ಪದಾತಿ ದಳದ, ಸ್ವಾತಂತ್ರ್ಯ ನಂತರದ ಮೊದಲ ಕಾರ್ಯಾಚರಣೆ, ಪಾಕಿಸ್ಥಾನದ ವಿರುದ್ಧ, ಜಮ್ಮು–ಕಾಶ್ಮೀರದಲ್ಲಿ, 1947ರಲ್ಲಿ ನಡೆಯಿತು. ಭಾರತೀಯ ಸೇನೆ ಅಂದು ದರ್ಶಿಸಿದ, ಶೌರ್ಯ, ಸಾಹಸ ಹಾಗೂ ತ್ಯಾಗವನ್ನು, 'ಪದಾತಿ ದಳಗಳ ದಿನ' ಸ್ಮರಿಸುತ್ತದೆ.

<><><>

ಬೆಳಗಾವಿಯ, ಮರಾಠಾ ಲಘು ಪದಾತಿ ದಳ, ಭಾರತೀಯ ಸೇನೆಯ,79ನೇ ಪದಾತಿ ದಳದ ಸ್ಮರಣೆಗಾಗಿ, ಶಿವಾಜಿ ಕ್ರೀಡಾಂಗಣದಲ್ಲಿ, 'ಶೌರ್ಯವೀರ್ ಓಟ' ಆಯೋಜಿಸಿತ್ತು. ಮರಾಠಾ ಲೈಟ್ ಇನ್ಫೆಂಟ್ರಿ ರೆಜಿಮೆಂಟಲ್ ಸೆಂಟರ್ ಕಮಾಂಡೆಂಟ್, ಬ್ರಿಗೇಡಿಯರ್ ಜಾಯ್ ದೀಪ್ ಮುಖರ್ಜಿ, ಶೌರ್ಯವೀರ್ ಓಟಕ್ಕೆ ಚಾಲನೆ ನೀಡಿದರು. 21 ಕಿಲೋ ಮೀಟರ್ ಹಾಫ್ ಮ್ಯಾರಥಾನ್, 10 ಕಿಲೋ ಮೀಟರ್ ಟೈಮ್ಡ್ ರನ್ ಹಾಗೂ 5 ಕಿಲೋ ಮೀಟರ್ ಓಟದಲ್ಲಿ, ಯುವಜನತೆ, ಮಹಿಳೆಯರು ಹಾಗೂ ಹಿರಿಯರು ಉತ್ಸಾಹದಿಂದ ಪಾಲ್ಗೊಂಡು, ಪದಾತಿ ದಳದ ಚೈತನ್ಯ ಬಿಂಬಿಸಿದರು. 21 ಕಿಲೋ ಮೀಟರ್ ಹಾಫ್ ಮ್ಯಾರಥಾನ್‌ನಲ್ಲಿ ಭಾಗವಹಿಸಿ, ಪ್ರಥಮ ಸ್ಥಾನ ಪಡೆದ, ಬೆಳಗಾವಿಯ ದಂತ ವೈದ್ಯೆ, ನೇತ್ರಾ ಸುತಾರ್, ಶೌರ್ಯವೀರ್ ಓಟ, ಧೈರ್ಯ, ಸಹಿಷ್ಣುತೆ ಮತ್ತು ಏಕತೆಯನ್ನು ಸಾಧಿಸುವ ಉದ್ದೇಶದೊಂದಿಗೆ ಆಯೋಜಿಸಿ, ಶ್ರೀಸಾಮಾನ್ಯರಲ್ಲಿ ಪದಾತಿ ದಳದ ಬಗ್ಗೆ ಅಭಿಮಾನ ಮೂಡಿಸುವಲ್ಲಿ, ಯಶಸ್ವಿಯಾಯಿತು, ಎಂದರು.

<><><>

'ದ್ರಾಕ್ಷಿ ನಾಡು' ವಿಜಯಪುರ ಜಿಲ್ಲೆ, ಶಿವಣಗಿ ಗ್ರಾಮದ ರೈತ, ನವೀನ ರಾವುತಪ್ಪ ಮಂಗಾನವರ, ತಮ್ಮ 7 ಎಕರೆ, ಕಾಡು ತೋಟದಲ್ಲಿ, ಥೈಲ್ಯಾಂಡ್ ಹಾಗೂ ಹಿಮಾಚಲದ ಮಾವಿನ ಹಣ್ಣು, ಜಪಾನಿನ ಮಿಯಾ ಝಾಕಿ, ವಿಯೆಟ್ನಾಂ ಹಲಸು, ನೇರಳೆ, ಕಿತ್ತಳೆ, ಚಿಕ್ಕು ಹಾಗೂ ಆ್ಯಪಲ್ ಪೇರು, ವರ್ಷಪೂರ್ತಿ ಲಭ್ಯವಾಗುವಂತೆ, ಬೆಳೆದು, ಗಮನ ಸೆಳೆದಿದ್ದಾರೆ. ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಸಭಾ ಭವನದಲ್ಲಿ ನಿನ್ನೆ ಸಮಾರೋಪಗೊಂಡ, 'ರಫ್ತು ಗುಣಮಟ್ಟದ ಮಾವು ಉತ್ಪಾದನೆ ಹಾಗೂ ರಫ್ತು ವಿಧಾನಗಳು' ಕುರಿತ ಮಾವು ಬೆಳೆಗಾರರ, ಎರಡು ದಿನಗಳ ಕಾರ್ಯಾಗಾರದಲ್ಲಿ ನವೀನ, ಪಾಲ್ಗೊಂಡು, ತಮ್ಮ ಅನುಭವ ಹಂಚಿಕೊಂಡರು. ರಾಷ್ಟ್ರೀಯ ತೋಟಗಾರಿಕಾ ಮಿಷನ್, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ಹಾಗೂ ತೋಟಗಾರಿಕೆ ಸಂಶೋಧನಾ ಸಂಸ್ಥೆ ಆಶ್ರಯದಲ್ಲಿ ಆಯೋಜಿಸಿದ್ದ, ರಾಷ್ಟ್ರೀಯ ಕಾರ್ಯಾಗಾರದಲ್ಲಿ, ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಂದ, 200ಕ್ಕೂ ಹೆಚ್ಚು ಜನ ಮಾವು ಬೆಳೆಗಾರರು, ಭಾಗವಹಿಸಿದ್ದರು. ಪ್ರದೇಶ ಸಮಾಚಾರಕ್ಕಾಗಿ, ನವೀನ ಮಂಗಾನವರ, ತಮ್ಮ ಮಾವು ಕೃಷಿ ಅನುಭವ ಹಂಚಿಕೊಂಡಿದ್ದಾರೆ.

<><><>

ನವೀನ ಮಂಗಾನವರ ಧ್ವನಿ 50 ಸೆಕೆಂದುಗಳು

<><><>

ಸತರ್ಕತಾ ಸಪ್ತಾಹದ ಜಿಂಗಲ್ 20 ಸೆಕೆಂದುಗಳು

<><><>

ಭಾರತದ ಉಕ್ಕಿನ ಮನುಷ್ಯ ಎಂದೇ ಖ್ಯಾತರಾದ, ದೇಶದ ಪ್ರಥಮ ಗೃಹ ಖಾತೆ ಸಚಿವ ಹಾಗೂ ಬಾರ್ಡೋಲಿಯ ಸರ್ದಾರ, ವಲ್ಲಭ ಭಾಯಿ ಪಟೇಲ ಅವರ, ಜನ್ಮ ದಿನಾಚರಣೆ ಹಿನ್ನೆಲೆ, ಕೇಂದ್ರ ವಿಚಕ್ಷಣಾ ಆಯೋಗ – ಸೆಂಟ್ರಲ್ ವಿಜಿಲೆನ್ಸ್ ಕಮಿಷನ್, ಇಂದಿನಿಂದ ನವೆಂಬರ್ 2ನೇ ತಾರೀಖಿನ ವರೆಗೆ, 'ಜಾಗರೂಕತೆ ಸಪ್ತಾಹ' ಆಚರಿಸಲಿದೆ. 'ಜಾಗರೂಕತೆ; ನಮ್ಮೆಲ್ಲರ ಸಹಭಾಗಿತ್ವದ ಹೊಣೆ' ಎಂಬ ಧ್ಯೇಯದೊಂದಿಗೆ, ಈ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಭ್ರಷ್ಟಾಚಾರದ ಬಗ್ಗೆ ಎಚ್ಚರಿಕೆ, ಆಡಳಿತ ಹಾಗೂ ಸಾರ್ವಜನಿಕ ಸೇವೆಗಳಲ್ಲಿ, ಪಾರದರ್ಶಕತೆ, ಐಕ್ಯತೆ ಮತ್ತು ಸೇವಾ ತತ್ಪರತೆ ಖಾತ್ರಿ ಪಡಿಸುವ ಧ್ಯೇಯದೊಂದಿಗೆ, 'ಸತರ್ಕತಾ ಜಾಗೃತಿ ಸಪ್ತಾಹ' ಆಯೋಜಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ, ಎಲ್ಲ ಕಚೇರಿಗಳಲ್ಲಿ, 'ಜಾಗರೂಕತೆ ಸಪ್ತಾಹ', ಹಾಗೂ ಸಿಬ್ಬಂದಿಯಿಂದ, ಪ್ರತಿಜ್ಞಾ ವಿಧಿ ಸ್ವೀಕಾರ, ಇಂದು ಜರುಗಲಿದೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನ ವಿಧಾನಸೌಧದ, ಸಮ್ಮೇಳನ ಸಭಾಂಗಣದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಭ್ರಷ್ಟಾಚಾರ ವಿರುದ್ಧದ, ಜಾಗರೂಕತೆ ಜನ ಜಾಗೃತಿ ಸಪ್ತಾಹಕ್ಕೆ, ಸಂಪುಟದ ಹಿರಿಯ ಸಹೋದ್ಯೋಗಿಗಳೊಂದಿಗೆ, ಚಾಲನೆ ನೀಡಲಿದ್ದಾರೆ. ವಿವಿಧ ಸಚಿವಾಲಯಗಳು ಹಾಗೂ ಎಲ್ಲ ಇಲಾಖೆಗಳ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ, ಜಾಗರೂಕತೆ ಸಪ್ತಾಹದ, ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮನ್ ಕಿ ಬಾತ್; ಬಾಗಲಕೋಟೆ ಜಿಲ್ಲೆ, ಮುಧೋಳ ಬೇಟೆ ನಾಯಿ, ಗಡಿ ರಕ್ಷಣಾ ಪಡೆ ಸೇರ್ಪಡೆಗೆ, ಪ್ರಧಾನಮಂತ್ರಿ ಮೆಚ್ಚುಗೆ.
- 79ನೇ, 'ಪದಾತಿ ದಳ ದಿನಾಚರಣೆ'; ಬೆಳಗಾವಿಯ, ಮರಾಠಾ ಲಘು ಪದಾತಿ ದಳದಿಂದ, 'ಶೌರ್ಯವೀರ್ ಮ್ಯಾರಾಥಾನ್'.
- 'ಗುಣಮಟ್ಟದ ಮಾವು ಉತ್ಪಾದನೆ ಹಾಗೂ ರಫ್ತು'; ಮಾವು ಕೃಷಿಕರ, ರಾಷ್ಟ್ರೀಯ ಕಾರ್ಯಾಗಾರ, ಧಾರವಾಡದಲ್ಲಿ, ಯಶಸ್ವಿ ಸಂಪನ್ನ.
- 'ಜಾಗರೂಕತೆ; ಸಹಭಾಗಿತ್ವದ ಹೊಣೆ' ಧ್ಯೇಯದೊಂದಿಗೆ, ಇಂದಿನಿಂದ ನವೆಂಬರ್ 2ರ ವರೆಗೆ, 'ಜಾಗರೂಕತೆ ಸಪ್ತಾಹ'.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.